# ೨

# ಭಾರತೀಯ ತರಗತಿಗಳ ಸಶಕ್ತ ಪಠ್ಯ

– ನಿಧಿ ಕನ್ವರ್

**ಸಾರಾಂಶ: ಈ ಲೇಖನದಲ್ಲಿ, ಪಠ್ಯಪುಸ್ತಕದ ಬದಲು ಗೈಡ್‌ಬುಕ್‌ಗಳ ಬಳಕೆ, ಪಠ್ಯಪುಸ್ತಕ ಮತ್ತು ಗೈಡ್‌ಬುಕ್‌ಗಳಲ್ಲಿನ ಅಭ್ಯಾಸ ಚಟುವಟಿಕೆಗಳ ನಡುವಿನ ಗುಣಾತ್ಮಕ ವ್ಯತ್ಯಾಸಗಳು ಹಾಗೂ ಪಠ್ಯಪುಸ್ತಕಗಳ ಸಮರ್ಪಕ ಬಳಕೆಯನ್ನು ಸಾಧಿಸುವಲ್ಲಿ ಶಿಕ್ಷಕ ತರಬೇತಿಯ ಮಹತ್ತ್ವವನ್ನು ಕುರಿತು ಚರ್ಚಿಸಲಾಗಿದೆ.**

**ಪ್ರಮುಖ ಪದಗಳು:– ಸೃಷ್ಟ್ಯಾತ್ಮಕ ಪಠ್ಯಪುಸ್ತಕ–Creative text, ಸಶಕ್ತ ಪಠ್ಯ–Strong text, ರಚನಾವಾದ–Constructivism, ವರ್ತನಾವಾದ–Behaviorism, ವ್ಯಾವಹಾರಿಕ ಪರಿಕಲ್ಪನೆ–Banking Concept, ಮಾರ್ಗದರ್ಶಿ ಪುಸ್ತಕ ಸಂಸ್ಕೃತಿ– Guide book culture.**

* * *

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫(ಎನ್. ಸಿ. ಎಫ್ ೨೦೦೫) 'ರಚನಾವಾದ'ದ ವಿಚಾರಗಳನ್ನು ಪ್ರತಿಪಾದಿಸಿ ಪಠ್ಯಪುಸ್ತಕಗಳಲ್ಲಿ ಮಕ್ಕಳ ಜೀವನಕ್ಕೆ ಸಂಬಂಧಿಸಿದ ವಿಷಯವಸ್ತುಗಳನ್ನು ಸೇರಿಸುವುದಕ್ಕೆ ಹೆಚ್ಚಿನ ಒತ್ತು ನೀಡಿತು. ಎನ್‌ಸಿಎಫ್ ೨೦೦೫ ರ ಶಿಫಾರಸ್ಸುಗಳ ಆಧಾರದ ಮೇಲೆ ಎಲ್ಲ ವಿಷಯಗಳ ಪಠ್ಯಪುಸ್ತಕಗಳನ್ನು ರಚಿಸಲಾಯಿತು. ಈ ಲೇಖನವು ಹಾಗೆ ರಚಿಸಲಾದ 'ರಿಮ್‌ಝಿಮ್' ಭಾಷಾ ಪಠ್ಯಪುಸ್ತಕಗಳ ಮೇಲೆ ಕೇಂದ್ರೀಕೃತವಾಗಿದ್ದು ಭಾರತೀಯ ತರಗತಿಗಳಲ್ಲಿ ಈ ಪುಸ್ತಕಗಳ ಬಳಕೆಯ ವಾಸ್ತವ ಸ್ಥಿತಿಯನ್ನು ವಿಶ್ಲೇಷಿಸುವುದಾಗಿದೆ.

ಶಿಕ್ಷಕರ ತರಬೇತುದಾರಳಾಗಿ ಮೊದಲ ಬಾರಿ 'ರಿಮ್‌ಝಿಮ್' ಪಠ್ಯಪುಸ್ತಕಗಳನ್ನು ಓದಿದಾಗ ನಾನು ಬಹಳ ಉತ್ಸಾಹಿತಳಾಗಿದ್ದೆ. ಆದರೆ ಪ್ರಾಥಮಿಕ ಶಾಲಾ ತರಗತಿಗಳಲ್ಲಿ ಆ ಪಠ್ಯಪುಸ್ತಕಗಳನ್ನು ಬಳಸುತ್ತಿರುವ ರೀತಿಯನ್ನು ನೋಡಿ ಆ ಉತ್ಸಾಹ ನಿರಾಸೆಯಾಗಿ ಬದಲಾಯಿತು. ಏಕೆಂದರೆ ಪಠ್ಯಪುಸ್ತಕದ ಬದಲಿಗೆ

ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರೂ ಮಾರ್ಗದರ್ಶಿ ಪುಸ್ತಕಗಳ (ಗೈಡ್‌ಬುಕ್ಸ್) ಮೇಲೆ ಅವಲಂಬಿತರಾಗಿದ್ದರು. ಈ ಲೇಖನವು ನಾನು ಕೈಗೊಂಡ ಪಠ್ಯಪುಸ್ತಕ ಮತ್ತು ಗೈಡ್‌ಬುಕ್‌ಗಳ ವಿಶ್ಲೇಷಣೆ ಹಾಗೂ ತರಗತಿ ವೀಕ್ಷಣೆಯ ಪ್ರತಿಫಲವಾಗಿದೆ. ಈ ಲೇಖನವನ್ನು ಮೂರು ಭಾಗಗಳಾಗಿ ವಿಭಾಗಿಸಿದ್ದು ಮೊದಲನೆಯ ಭಾಗದಲ್ಲಿ 'ರಿಮ್‌ಝಿಮ್' ಪಠ್ಯಪುಸ್ತಕಗಳ ವಿಶ್ಲೇಷಣೆ, ಎರಡನೆಯ ಭಾಗದಲ್ಲಿ ಆ ಪಠ್ಯಪುಸ್ತಕಗಳಿಗೆ ಸಂಬಂಧಿಸಿದ ಮಾರ್ಗದರ್ಶಿ ಪುಸ್ತಕಗಳ ಅಧ್ಯಯನ ಮತ್ತು ಕೊನೆಯ ಭಾಗದಲ್ಲಿ 'ಸಶಕ್ತ ಪಠ್ಯ'ಕ್ಕೆ ಎದುರಾಗಿ ಪಠ್ಯಪುಸ್ತಕಗಳ ಹೆಣಗಾಟದ ಬಗೆಗಿನ ಮೇಲಿನ ಚಿಂತನೆಗಳನ್ನು ಒಳಗೊಂಡಿದೆ.

## 'ರಿಮ್‌ಝಿಮ್' ಪಠ್ಯಪುಸ್ತಕಗಳು: ಒಂದು ವಿಶ್ಲೇಷಣೆ

ನನ್ನ ಅಧ್ಯಯನದ ಭಾಗವಾಗಿ ನಾನು 'ರಿಮ್‌ಝಿಮ್' ಸರಣಿಯ ಎರಡು ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಅವೆಂದರೆ ರಿಮ್‌ಝಿಮ್ ೨ ಮತ್ತು ರಿಮ್‌ಝಿಮ್ ೪. ರಿಮ್‌ಝಿಮ್ ೨ರಿಂದ ಎರಡು ಅಧ್ಯಾಯಗಳು- 'ಅಧಿಕ್ ಬಲವಾನ್ ಕೌನ್' (ಅಧ್ಯಾಯ ೪) ಮತ್ತು 'ಬಹುತ್ ಹುವಾ' (ಅಧ್ಯಾಯ ೬) ಗಳನ್ನು ಗಮನಿಸಿದ್ದೇನೆ. ರಿಮ್‌ಝಿಮ್ ೪ರಿಂದ 'ನಾವ್ ಬನಾವೋ, ನಾವ್ ಬನಾವೋ' ಪಠ್ಯ (ಅಧ್ಯಾಯ ೬) ಮತ್ತು 'ಸುನಿತಾ ಕೀ ಪಹಿಯಾ ಕುರ್ಸೀ' (ಅಧ್ಯಾಯ ೧೨) ಶೀರ್ಷಿಕೆಯ ಪಠ್ಯಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಈ ಆಯ್ದ ಅಧ್ಯಾಯಗಳ ವಿಶ್ಲೇಷಣೆಯು ಆ ಪುಸ್ತಕಗಳ ಅತ್ಯುತ್ತಮ ಗುಣಮಟ್ಟವನ್ನು ಎತ್ತಿಹಿಡಿಯುವ ಈ ಕೆಳಕಂಡ ಅಂಶಗಳನ್ನು ಪ್ರಕಟಪಡಿಸಿದೆ.

### ೧. ಓದುವಿಕೆ, ಬರವಣಿಗೆ ಮತ್ತು ಮಾತನಾಡುವಿಕೆಯ ನಡುವೆ ಸಹಸಂಬಂಧ

'ರಿಮ್‌ಝಿಮ್' ಸರಣಿಯ ಪಠ್ಯಪುಸ್ತಕಗಳ ಪ್ರಮುಖ ಸತ್ತ್ವವೆಂದರೆ ಭಾಷಾ ಚಟುವಟಿಕೆಗಳಲ್ಲಿನ ಸಮನ್ವಯತೆ; ವಿವಿಧ ಭಾಷಾ ಕೌಶಲಗಳ ನಡುವೆ ಪರಸ್ಪರ ಸಂಬಂಧ ಇರುವ ರೀತಿಯಲ್ಲಿ ಭಾಷಾ ಚಟುವಟಿಕೆಗಳನ್ನು ವಿನ್ಯಾಸಗೊಳಿಸಲಾಗಿದೆ. ಇದು ಈ ಕೆಳಗಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

- ತುಂಬ ರಭಸವಾಗಿ ಮಳೆ ಸುರಿಸುತ್ತವೆಂದು ಎಲ್ಲರೂ ಕಟುವಾಗಿ ದೂರಿದ್ದರಿಂದ ಬೇಸರಗೊಂಡು ಮೋಡಗಳು ಒಂದು ದಿನ ಇನ್ನು ಮುಂದೆ ಮಳೆ ಸುರಿಸುವುದಿಲ್ಲವೆಂದು ತೀರ್ಮಾನಿಸಿದವು. ಮಳೆ ಬರದಿದ್ದರೆ ಮುಂದೆ ಏನಾಗುತ್ತದೆ? ಕಥೆಯನ್ನು ವಿಸ್ತರಿಸಿ. (ರಿಮ್‌ಝಿಮ್ ೨, ಪು.೩೭)

- ಗಾಳಿಯು, ಸೂರ್ಯನಿಗೆ, ನೆಲದ ಮೇಲಿರುವ ಆ ಟೆಂಟನ್ನು (ಡೇರೆ) ಯಾರು ಉರುಳಿಸುತ್ತಾರೋ ಅವರೇ ಹೆಚ್ಚು ಶಕ್ತಿವಂತರು ಎಂದು ಹೇಳಿದಂತೆ ಊಹಿಸಿಕೊಳ್ಳಿ. ಆಗ ಕಥೆ ಹೇಗೆ ಮುಂದುವರಿಯುತ್ತದೆ? ಯೋಚಿಸಿ ಹೇಳಿ. (ರಿಮ್‌ಝಿಮ್ ೨, ಪು.೨೬)

### ೨. ವೈಯಕ್ತಿಕ ಅನುಭವಗಳನ್ನು ಆಧರಿಸಿದ ಪ್ರಶ್ನೆಗಳು

ಗ್ರೇವ್ಸ್ (೧೯೮೩)ಅವರ ಪ್ರಕಾರ 'ವಿದ್ಯಾರ್ಥಿಗಳಿಗೆ ತಮ್ಮ ವೈಯಕ್ತಿಕ ಅನುಭವಗಳ ಆಧಾರದ ಮೇಲೆ ಬರೆಯುವ ಅವಕಾಶ ಮಾಡಿಕೊಟ್ಟಲ್ಲಿ ಅವರ 'ಧ್ವನಿ' ಅವರ ಬರವಣಿಗೆಗಳಲ್ಲಿ ಸಹಜವಾಗಿ ಪ್ರತಿಬಿಂಬಿಸುತ್ತದೆ. 'ರಿಮ್‌ಝಿಮ್' ನಲ್ಲಿ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಅನುಭವಗಳನ್ನು ತರಗತಿಯಲ್ಲಿ ಹಂಚಿಕೊಳ್ಳುವಂತಹ ಹಲವಾರು ಅಭ್ಯಾಸ ಚಟುವಟಿಕೆಗಳನ್ನು ಕಾಣಬಹುದಾಗಿದೆ. ಈ ರೀತಿಯ ಅಭ್ಯಾಸ ಚಟುವಟಿಕೆಗಳ ಕೆಲವು ಉದಾಹರಣೆಗಳು ಈ ಕೆಳಗಿನಂತಿವೆ.

- ಕಥೆಯಲ್ಲಿನ ಪಾತ್ರವೊಂದು ಬಹಳ ಸೆಖೆಯಾದಾಗ ತನ್ನ ಕೋಟನ್ನು ತೆಗೆಯಿತು. ಬೇಸಿಗೆಯಲ್ಲಿ ಸೆಖೆಯೆನಿಸಿದಾಗ ನೀವೇನು ಮಾಡುತ್ತೀರಿ? (ರಿಮ್‌ಝಿಮ್ ೨, ಪು.೨೫).
- ಮಳೆಗಾಲದಲ್ಲಿ ಸಾಮಾನ್ಯವಾಗಿ ನೀರು ರಸ್ತೆಗಳ ಮೇಲೆ ನಿಂತುಬಿಡುತ್ತದೆ. ಮಳೆಗಾಲದಲ್ಲಿ ನಿಮ್ಮ ಮನೆ ಮತ್ತು ನೆರೆಹೊರೆಯಲ್ಲಿ ಏನಾಗುತ್ತದೆ? ತರಗತಿಯೊಂದಿಗೆ ಹಂಚಿಕೊಳ್ಳಿ. (ರಿಮ್‌ಝಿಮ್ ೪, ಪು.೪೯).

### ೩. ಕಲ್ಪನೆ ಆಧಾರಿತ ಪ್ರಶ್ನೆಗಳು

'ರಿಮ್‌ಝಿಮ್' ಪಠ್ಯಪುಸ್ತಕದಲ್ಲಿ ಕಲ್ಪನೆಯನ್ನು ಆಧರಿಸಿದ ಬಹಳಷ್ಟು ಪ್ರಶ್ನೆಗಳಿವೆ. ಆಸಕ್ತಿದಾಯಕ ಸನ್ನಿವೇಶಗಳನ್ನು ನೀಡಲಾಗಿದ್ದು ವಿದ್ಯಾರ್ಥಿಗಳು ಕಲ್ಪಿಸಿಕೊಂಡು ಉತ್ತರ ಬರೆಯುವುದನ್ನು ನಿರೀಕ್ಷಿಸಲಾಗಿದೆ. ಉದಾಹರಣೆಗೆ:

- ಸುನಿತಾಳನ್ನು ಕುರಿತಾದ ಈ ಪಾಠವನ್ನು ಓದಿದ ಅನಂತರ ನಿಮ್ಮ ಮನಸ್ಸಿನಲ್ಲಿ ಬಹಳಷ್ಟು ವಿಚಾರಗಳು ಮತ್ತು ಪ್ರಶ್ನೆಗಳು ಬಂದಿರಬಹುದು. ಅವುಗಳನ್ನೆಲ್ಲ ಸೇರಿಸಿ ಸುನಿತಾಗೆ ಒಂದು ಪತ್ರವನ್ನು ಬರೆಯಿರಿ. (ರಿಮ್‌ಝಿಮ್ ೪, ಪು.೧೦೪).
- ಪದ್ಯವನ್ನು ಮತ್ತೊಮ್ಮೆ ಓದಿ. ದೋಣಿ ಮತ್ತು ಅದರ ಪ್ರಯಾಣದ ಕತೆ ಈ ಪದ್ಯದಲ್ಲಿ ಅಡಕವಾಗಿದೆ. ನೀನು ದೋಣಿಯೆಂದು ಕಲ್ಪಿಸಿಕೊಂಡು ನಿನ್ನ ಕತೆಯನ್ನು ಎಲ್ಲರೊಂದಿಗೆ ಹಂಚಿಕೊ. (ರಿಮ್‌ಝಿಮ್, ಪು.೪೬).

### ೪. ಸೃಷ್ಟ್ಯಾತ್ಮಕ ವಿಚಾರಗಳನ್ನು ಕುರಿತ ಪ್ರಶ್ನೆಗಳು

ಪಠ್ಯಪುಸ್ತಕದಲ್ಲಿ ಮಕ್ಕಳಿಗೆ ಕೆಲವು ವಾಸ್ತವ ಸಮಸ್ಯೆಗಳನ್ನು ಕೊಟ್ಟು ಅವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಹಿಡಿಯುವಂತಹ ಅವಕಾಶ ಕಲ್ಪಿಸಲು ಪ್ರಯತ್ನಿಸಲಾಗಿದೆ. ಈ ಪ್ರಶ್ನೆಗಳಿಗೆ ಉತ್ತರಿಸಲು ಸೃಷ್ಟ್ಯಾತ್ಮಕ ಚಿಂತನೆ ಮತ್ತು ಹೊಸ ವಿಚಾರಗಳ ಅಗತ್ಯವಿದೆ. ಆ ರೀತಿಯ ಪ್ರಶ್ನೆಗಳಿಗೆ ಸಂಬಂಧಿಸಿದ ಉದಾಹರಣೆಗಳು ಈ ಕೆಳಗಿನಂತಿವೆ;

ಸುನಿತಾಳಂತೆ ಹಲವು ಮಕ್ಕಳಿದ್ದಾರೆ. ಕೆಲವರಿಗೆ ನೋಡಲಾಗುವುದಿಲ್ಲ, ಮತ್ತೆ ಕೆಲವರಿಗೆ ಮಾತನಾಡಲು ಇಲ್ಲವೇ ಕೇಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕೆಲವರಿಗೆ ಕೈ ಸರಿಯಿಲ್ಲದಿದ್ದರೆ ಮತ್ತೆ ಕೆಲವರಿಗೆ ನಡೆಯಲು ಸಾಧ್ಯವಾಗುವುದಿಲ್ಲ. ಅಂತಹ ಮಗುವೊಂದರ ಬಗ್ಗೆ ಯೋಚಿಸಿ. ನಿಮಗೆ ಯಾವುದಾದರೂ ದೈಹಿಕ ಸಮಸ್ಯೆ ಇದ್ದರೆ, ನೀವು ಎದುರಿಸುತ್ತಿರುವ ಸವಾಲುಗಳನ್ನು ಕುರಿತು ಯೋಚಿಸಿ. ಆ ಸವಾಲುಗಳನ್ನು ಎದುರಿಸಲು ನೀವು ಏನನ್ನು ಕಂಡುಹಿಡಿಯಲು ಬಯಸುವಿರಿ? ಅದರ ಬಗ್ಗೆ ಯೋಚಿಸಿ, ಹೇಳಿ.

- ಅದನ್ನು ಹೇಗೆ ತಯಾರಿಸುತ್ತೀರಿ?
- ಅದನ್ನು ತಯಾರಿಸಲು ನಿಮಗೆ ಅಗತ್ಯವಾದ ವಸ್ತುಗಳಾವುವು?
- ಆ ಸಲಕರಣೆಯಿಂದ ಮಾಡಬಹುದಾದ/ಆಗಬಹುದಾದ ಕಾರ್ಯಗಳೇನು?
- ಆ ವಸ್ತುವಿನ ಚಿತ್ರವನ್ನು ಬಿಡಿಸಿ.

ಈ ಮೇಲಿನ ಉದಾಹರಣೆಗಳಿಂದ 'ರಿಮ್‌ಝಿಮ್' ಪಠ್ಯಪುಸ್ತಕಗಳು ಭಾಷಾ ಬೆಳವಣಿಗೆಗೆ ಹೇಗೆ ವಿಪುಲ ಅವಕಾಶಗಳನ್ನು ಒದಗಿಸುತ್ತವೆ ಎನ್ನುವುದು ಸ್ಪಷ್ಟವಾಗುತ್ತದೆ. ಈ ರೀತಿಯಲ್ಲಿ ರಚಿತವಾಗಿರುವ ಪ್ರಶ್ನೆಗಳು ತಲಪಬೇಕಾದ ಕಲಿಕಾರ್ಥಿಗಳು, ಅದರ ಉದ್ದೇಶ ಮತ್ತು ವೈಯಕ್ತಿಕ 'ಧ್ವನಿ'ಗೆ ಅವಕಾಶ ನೀಡುವ ಸ್ಪಷ್ಟತೆಯನ್ನು ಹೊಂದಿವೆ.

### ಮಾರ್ಗದರ್ಶಿ ಪುಸ್ತಕ (ಗೈಡ್‌ಬುಕ್ಸ್) ಗಳ ಸಂಸ್ಕೃತಿ

'ರಿಮ್‌ಝಿಮ್' ಸರಣಿಯ ಪುಸ್ತಕಗಳ ಗುರಿ ಈಡೇರುವುದು ಅವುಗಳನ್ನು ವಿನ್ಯಾಸಗೊಳಿಸಲಾದ ಉದ್ದೇಶಗಳಿಗನುಗುಣವಾಗಿ ಅವುಗಳನ್ನು ತರಗತಿಯಲ್ಲಿ ಬಳಸುವುದರಿಂದ ಮಾತ್ರ. ಅಂತಹ ಸೃಷ್ಟ್ಯಾತ್ಮಕ ಪಠ್ಯಪುಸ್ತಕಗಳನ್ನು ಓದಿದ ಅನಂತರ ಭಾಷಾ ತರಗತಿಗಳು ತುಂಬ ಸೃಷ್ಟ್ಯಾತ್ಮಕ ಮತ್ತು ಸಂಭ್ರಮದಾಯಕವಾಗಿರುತ್ತವೆ

ಎಂದು ಭಾವಿಸುವುದು ಸಹಜ. ಆದರೆ ವಾಸ್ತವವು ಬೇರೆಯಾಗಿಯೇ ಕಾಣುತ್ತಿದೆ. ಶಿಕ್ಷಕರ ಶಿಕ್ಷಕಿಯಾಗಿ, ನಾನು ಶಾಲೆಗೆ ಭೇಟಿ ನೀಡಿದ ಸಂದರ್ಭಗಳಲ್ಲಿ 'ರಿಮ್‌ಝಿಮ್' ಸರಣಿ ಪುಸ್ತಕಗಳ ಬಗ್ಗೆ ಅಭಿಪ್ರಾಯ ಪಡೆಯಲು ಪ್ರಾಥಮಿಕ ಶಾಲಾ ಶಿಕ್ಷಕರ ಜೊತೆ ಮಾತನಾಡಲು ಪ್ರಯತ್ನಿಸಿದೆ. ದುರದೃಷ್ಟವಶಾತ್ ಶಿಕ್ಷಕರ ಪ್ರತಿಕ್ರಿಯೆಯಲ್ಲಿ ಅತೃಪ್ತ ಭಾವನೆಗಳೇ ತುಂಬಿಕೊಂಡಿದ್ದವು. ಪಠ್ಯಪುಸ್ತಕಗಳು ಕತೆಗಳು, ಪದ್ಯಗಳು ಮತ್ತು ನಾಟಕಗಳಿಂದ ತುಂಬಿದ್ದರೂ ಸಾಂಪ್ರದಾಯಿಕವಾದ ಅಭ್ಯಾಸ ಚಟುವಟಿಕೆಗಳನ್ನು ಒಳಗೊಂಡಿರದ ಬಗ್ಗೆ ಶಿಕ್ಷಕರು ಪ್ರಶ್ನಿಸುತ್ತಾರೆ.

ಬಹಳಷ್ಟು ಬಾರಿ, ಮೂಲ ಅಕ್ಷರಗಳ ಪರಿಚಯವಿರುವ ವರ್ಣಮಾಲೆಯೊಂದಿಗೆ ಆರಂಭವಾಗದ ಹಿಂದಿ ಪುಸ್ತಕಗಳ ಉಪಯುಕ್ತತೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಶಿಕ್ಷಕರು ಕಷ್ಟಪಡುತ್ತಿದ್ದಾರೆ. ಹಾಗಾಗಿ ಖಾಸಗಿ ಪ್ರಕಾಶಕರಿಂದ ಪ್ರಕಟಿಸಲಾದ ಅಭ್ಯಾಸ ಪುಸ್ತಕಗಳು ಅಥವಾ ಮಾರ್ಗದರ್ಶಿ ಪುಸ್ತಕಗಳನ್ನು ಬಳಸಿ ಪಾಠಗಳನ್ನು ಬೋಧಿಸುವುದನ್ನು ಇಷ್ಟಪಡುತ್ತಾರೆ. ಏಕೆಂದರೆ ಅವುಗಳೆಲ್ಲ ಸಾಂಪ್ರದಾಯಿಕ ಚಟುವಟಿಕೆಯಿಂದ ತುಂಬಿವೆ. 'ರಿಮ್‌ಝಿಮ್' ಪುಸ್ತಕ ಸರಣಿಯ ಮೂಲ ಉದ್ದೇಶಗಳನ್ನು ಈ ಅಭ್ಯಾಸ ಪುಸ್ತಕ ಮತ್ತು ಮಾರ್ಗದರ್ಶಿ ಪುಸ್ತಕಗಳು ಹೇಗೆ ವಿಫಲಗೊಳಿಸುತ್ತಿವೆ ಎನ್ನುವುದನ್ನು ಈ ವಿಭಾಗದಲ್ಲಿ ನೋಡೋಣ.

ನನ್ನ ವಾದವನ್ನು ಪುಷ್ಟೀಕರಿಸಲು 'ರಿಮ್‌ಝಿಮ್' ಪುಸ್ತಕಗಳ ಬದಲಿಗೆ ಶಿಕ್ಷಕರು ಬಳಸುವ ಆ ಅಭ್ಯಾಸ ಪುಸ್ತಕಗಳು ಮತ್ತು ಮಾರ್ಗದರ್ಶಿ ಪುಸ್ತಕಗಳಿಂದ ಹಲವು ಉದಾಹರಣೆಗಳನ್ನು ನೀಡುತ್ತೇನೆ. ಸ್ಪಷ್ಟತೆ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ನಾನು ಈ ಹಿಂದಿನ ವಿಭಾಗದಲ್ಲಿ ಚರ್ಚಿಸಿದ ಪಾಠಗಳನ್ನೇ ಇಲ್ಲಿಯೂ ಆಯ್ಕೆ ಮಾಡಿಕೊಂಡಿದ್ದೇನೆ.

**೧. ಮಾಹಿತಿ ಆಧಾರಿತ ಪ್ರಶ್ನೆಗಳು**

ಅಭ್ಯಾಸ ಪುಸ್ತಕವು ಕತೆಗಳ ಮೇಲೆ ಆಧಾರಿತವಾಗಿದ್ದು ಸಂಪೂರ್ಣವಾಗಿ ಸಾಂಪ್ರದಾಯಿಕ ಮತ್ತು ಮಾಹಿತಿ ಆಧಾರಿತ ಪ್ರಶ್ನೆಗಳಿಂದ ಕೂಡಿದೆ. ವಿದ್ಯಾರ್ಥಿಗಳು ಪಠ್ಯವನ್ನು ಓದಿ ಅನಂತರ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸುವುದನ್ನು ಇಲ್ಲಿ ನಿರೀಕ್ಷಿಸಲಾಗಿದೆ. ಉದಾ:

- ಸುನಿತಾಳ ತಾಯಿ ಅವಳಿಗೆ ಏನನ್ನು ತರಲು ಹೇಳಿದರು? (ಅಭ್ಯಾಸ ಪುಸ್ತಕ ರಿಮ್‌ಝಿಮ್ ೪, ಪು.೭೮).
- ಸೂರ್ಯ ಮತ್ತು ಗಾಳಿಯ ನಡುವೆ ಏನು ತೀರ್ಮಾನವಾಯಿತು? (ಅಭ್ಯಾಸ ಪುಸ್ತಕ ರಿಮ್‌ಝಿಮ್ ೨, ಪು.೨೨)

**೨. ಸೂಕ್ಷ್ಮತೆಯಿಲ್ಲದ ಮನೋಭಾವ**

ಪಠ್ಯಪುಸ್ತಕ ಸರಣಿಯ ಉದ್ದೇಶಕ್ಕೆ ಸಂಪೂರ್ಣ ತದ್ವಿರುದ್ಧವಾದ ಕೆಲವು ಪ್ರಶ್ನೆಗಳು ಈ ಅಭ್ಯಾಸ ಪುಸ್ತಕದಲ್ಲಿವೆ. ಅಭ್ಯಾಸ ಪುಸ್ತಕಗಳನ್ನು ತರಗತಿಯಲ್ಲಿ ವ್ಯಾಪಕವಾಗಿ ಬಳಸುತ್ತಿರುವುದರಿಂದ ವಿದ್ಯಾರ್ಥಿಗಳು ಈ ಕತೆಗಳಿಂದ ಏನನ್ನು ಕಲಿಯುತ್ತಾರೆ ಎನ್ನುವುದನ್ನು ಕುರಿತು ಚಿಂತಿಸುವುದು ಅಗತ್ಯ. ಉದಾಹರಣೆಗೆ, 'ಸುನಿತಾ ಕಿ ಪಹಿಯಾ ಕುರ್ಸೀ' (ರಿಮ್‌ಝಿಮ್ ೪) ಪಠ್ಯವನ್ನು ವಿದ್ಯಾರ್ಥಿಗಳಲ್ಲಿ ದೈಹಿಕ ನ್ಯೂನತೆಯುಳ್ಳ ಮಕ್ಕಳ ಬಗ್ಗೆ ಸಂವೇದನಾಶೀಲತೆ ಬೆಳೆಸುವ ದೃಷ್ಟಿಯಿಂದ ಸೇರಿಸಲಾಗಿದೆ. ಈ ಅಧ್ಯಾಯದಲ್ಲಿ ನಡೆದಾಡಲು ಸಾಧ್ಯವಾಗದ ಸುನಿತಾ ಎಂಬ ಹುಡುಗಿಯ ಕತೆಯನ್ನು ಕೊಡಲಾಗಿದೆ. ನಡೆದಾಡಲಾಗದಿದ್ದರೂ ಅವಳು ತನ್ನೆಲ್ಲ ಕೆಲಸಗಳನ್ನು ತಾನೇ ಸ್ವತಂತ್ರವಾಗಿ ಮಾಡಿಕೊಳ್ಳಲು ಇಚ್ಛಿಸುತ್ತಾಳೆ, ಅಲ್ಲದೆ ಯಾರಾದರೂ ಅವಳ ಕಡೆಗೆ ಅನುಕಂಪ ತೋರಿದರೆ ಮುಜುಗರ ಪಡುತ್ತಾಳೆ. ಸುನಿತಾ ಕೊನೆಗೆ ಅಮಿತ್ ಎಂಬ ಹುಡುಗನನ್ನು ಭೇಟಿ ಮಾಡುತ್ತಾಳೆ. ಜನ ಯಾವಾಗಲೂ ಅವನನ್ನು ಕುಳ್ಳ ಎಂದು ಅಣಕಿಸುತ್ತಿರುತ್ತಾರೆ. ಈ ಕತೆಯನ್ನು ಪ್ರಮುಖ ಪಾತ್ರಗಳಿಗೆ ಒತ್ತು ನೀಡಿ ಮಕ್ಕಳಲ್ಲಿ ಸಂವೇದನಾಶೀಲ ಮನೋಭಾವ ಬೆಳೆಸುವ ದೃಷ್ಟಿಯಿಂದ ಸೇರಿಸಲಾಗಿದೆ. ಈ ಪಾಠದ ಮೇಲೆ ಅಭ್ಯಾಸ ಪುಸ್ತಕದಲ್ಲಿ ನೀಡಲಾದ ಪ್ರಶ್ನೆಗಳು ಈ ಪಾಠದ ಉದ್ದೇಶಕ್ಕೆ ಸಂಪೂರ್ಣ ವಿರುದ್ಧವಾಗಿವೆ. ಆ ಪ್ರಶ್ನೆಗಳೆಂದರೆ...

- ನಿಮ್ಮ ಸ್ನೇಹಿತರನ್ನು ನೀವು ಹೇಗೆ ಆಡಿಕೊಳ್ಳುತ್ತೀರಿ?
- ನೀವು ನಿಮ್ಮ ಯಾವುದಾದರೂ ಐದು ಜನ ಸ್ನೇಹಿತರ ಹೆಸರುಗಳನ್ನು ಅವರನ್ನು ನೀವು ಆಡಿಕೊಳ್ಳುವ ಅಡ್ಡ ಹೆಸರುಗಳೊಂದಿಗೆ ಬರೆಯಿರಿ. (ಅಭ್ಯಾಸ ಪುಸ್ತಕ ರಿಮ್‌ಝಿಮ್ ೪, ಪು.೭೯)

ಈ ಪ್ರಶ್ನೆಯ ಧಾಟಿ ಮಕ್ಕಳನ್ನು ಅವರ ನ್ಯೂನತೆಗಳ ಆಧಾರದ ಮೇಲೆ ಆಡಿಕೊಳ್ಳುವುದು ಸರಿ ಎನ್ನುವ ಅಭಿಪ್ರಾಯವನ್ನು ನೀಡುತ್ತದೆ. ನಾಲ್ಕನೇ ತರಗತಿಯ ಮಕ್ಕಳು ಈ ರೀತಿಯ ಕತೆ ಮತ್ತು ಅಭ್ಯಾಸ ಚಟುವಟಿಕೆಯಿಂದ ಏನನ್ನು ಕಲಿಯುತ್ತಾರೆ ಎಂಬುದು ಚಿಂತಿಸಲೇಬೇಕಾದ ಸಂಗತಿ.

**೩. ಸಾಂಪ್ರದಾಯಿಕ ಅಭ್ಯಾಸ ಚಟುವಟಿಕೆಗಳು**

ಖಾಸಗಿ ಪ್ರಕಾಶಕರಿಂದ ಪ್ರಕಟಿಸಲ್ಪಟ್ಟ ಅಭ್ಯಾಸ ಪುಸ್ತಕಗಳು ಖಾಲಿ ಜಾಗ ಭರ್ತಿ ಮಾಡುವ, ಪದಗಳ ಅರ್ಥ, ಸಮಾನಾರ್ಥಕ ಮತ್ತು ವಿರುದ್ಧ ಪದಗಳು, ಸರಿ ಮತ್ತು ತಪ್ಪು ವಾಕ್ಯಗಳು ಹಾಗೂ ವಾಕ್ಯ ರಚನೆಯಂತಹ ಸಂಪೂರ್ಣ

ಯಾಂತ್ರಿಕ ಬರವಣಿಗೆಯ ಅಭ್ಯಾಸ ಚಟುವಟಿಕೆಗಳಿಂದ ಕೂಡಿವೆ. ಹಾಗಾಗಿ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಓದುವಿಕೆಯನ್ನು ಪ್ರೋತ್ಸಾಹಿಸುವ 'ರಿಮ್‌ಝಿಮ್' ಪಠ್ಯಪುಸ್ತಕ ರಚನಕಾರರ ಪ್ರಯತ್ನವು ಶೂನ್ಯ ಪ್ರತಿಫಲದಲ್ಲಿ ಕೊನೆಗೊಳ್ಳುತ್ತಿದೆ. ಅಭ್ಯಾಸ ಪುಸ್ತಕದ ಚಟುವಟಿಕೆಗಳು ಪಠ್ಯದಿಂದ ಕೇವಲ ಮಾಹಿತಿ ಪಡೆಯುವಂತಹ ಚಟುವಟಿಕೆಗಳಿಗೆ ಸೀಮಿತಗೊಂಡು ಸಾಹಿತ್ಯವನ್ನು ಅನುಭವಿಸುವುದಕ್ಕೆ ಯಾವುದೇ ಅವಕಾಶವನ್ನು ನೀಡುವುದಿಲ್ಲ.

**೪. ಚಿಂತನೆಗೆ ಅವಕಾಶವಿಲ್ಲದ ಅಭ್ಯಾಸ ಚಟುವಟಿಕೆಗಳು**

ಅಭ್ಯಾಸ ಪುಸ್ತಕಗಳ ವಿಶ್ಲೇಷಣೆಯು ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಬೋಧನೆಯ ನೈಜಸ್ಥಿತಿಯನ್ನು ಮನಗಾಣುವಂತೆ ಮಾಡಿದೆ. 'ರಿಮ್‌ಝಿಮ್' ಪಠ್ಯಪುಸ್ತಕಗಳಲ್ಲಿ ನೀಡಲಾದ ಮಾಹಿತಿ, ವಿಶ್ಲೇಷಣೆ, ಚಿಂತನೆ, ಅನುಭವಗಳು ಮತ್ತು ವೈಯಕ್ತಿಕ ದೃಷ್ಟಿಕೋನದ ಅಭಿವ್ಯಕ್ತಿಗೆ ಸಂಬಂಧಿಸಿದ ವ್ಯಾಪಕ ಶ್ರೇಣಿಯ ಎಲ್ಲ ಪ್ರಶ್ನೆಗಳಿಗೂ ಮಾರ್ಗದರ್ಶಿ ಪುಸ್ತಕದಲ್ಲಿ ಸಿದ್ಧ ಉತ್ತರಗಳನ್ನು ನೀಡಲಾಗಿದೆ. ಇದರಿಂದ ವಿದ್ಯಾರ್ಥಿಗಳನ್ನು ಸಂವೇದನಾಶೀಲರನ್ನಾಗಿ ಮಾಡಿ, ಸ್ವಯಂ ಚಿಂತನೆಗೆ ಹಚ್ಚುವಂತಹ 'ರಿಮ್‌ಝಿಮ್' ಪಠ್ಯಪುಸ್ತಕಗಳ ಪ್ರಯತ್ನಕ್ಕೆ ಧಕ್ಕೆಯುಂಟಾಗಿದೆ. ಈ ಸಮಸ್ಯೆಯು ಮತ್ತಷ್ಟು ಗಂಭೀರವಾಗಿರುವ ಕಾರಣವೆಂದರೆ ಬಹಳಷ್ಟು ಶಿಕ್ಷಕರು ತಮ್ಮ ತರಗತಿಯಲ್ಲಿ ದಿನನಿತ್ಯದ ಪಾಠಬೋಧನೆಗೆ ಪಠ್ಯಪುಸ್ತಕದ ಬದಲಿಗೆ ಈ ಮಾರ್ಗದರ್ಶಿ ಪುಸ್ತಕಗಳನ್ನು ಮಾತ್ರ ಬಳಸುತ್ತಿರುವುದು.

ರಿಮ್‌ಝಿಮ್ ಅಧ್ಯಾಯ ೪ರಲ್ಲಿ 'ಸುನಿತಾ ಕೀ ಪಹಿಯಾ ಕುರ್ಸೀ'ಯಲ್ಲಿ ಒಂದು ಪ್ರಶ್ನೆಯಿದೆ– ಕೇಳಿಸಿಕೊಳ್ಳಲು ಅಥವಾ ಮಾತನಾಡಲು ಆಗದ ಯಾವುದಾದರೂ ಮಗು ನಿಮಗೆ ಗೊತ್ತೇ? ಅಂತಹ ಮಗುವಿನೊಂದಿಗೆ ನೀವು ಹೇಗೆ ಮಾತನಾಡುತ್ತೀರಿ?– ಈ ಪ್ರಶ್ನೆ ಆ ರೀತಿಯ ನ್ಯೂನತೆ ಹೊಂದಿರುವ ಮಕ್ಕಳ ಬಗ್ಗೆ ವಿದ್ಯಾರ್ಥಿಗಳನ್ನು ಸಂವೇದನಾಶೀಲರನ್ನಾಗಿ ಮಾಡುವ ಉದ್ದೇಶ ಹೊಂದಿರುವ ಕಾರಣದಿಂದ ಬಹಳ ಮುಖ್ಯವಾಗಿದೆ. ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲ ವಾತಾವರಣದ ಬಗ್ಗೆ ಆಲೋಚಿಸಿದಾಗ ಮಾತ್ರ ಸುನಿತಾಳಂತಹ ಮಕ್ಕಳನ್ನು ಗುರುತಿಸಿ ಅವರೊಂದಿಗೆ ಸಂವಹನ ಸಾಧಿಸಲು ಸಾಧ್ಯ. ಈ ಪ್ರಶ್ನೆಗೂ ಮಾರ್ಗದರ್ಶಿ ಪುಸ್ತಕದಲ್ಲಿ ನೇರವಾದ ಉತ್ತರ ಕೊಡಲಾಗಿದೆ: ಕೇಳಿಸಿಕೊಳ್ಳಲು ಅಥವಾ ಮಾತನಾಡಲು ಬರದ ಮಗು ನನಗೆ ಗೊತ್ತು. ಅವನ ಹೆಸರು ವಿಶಾಲ್. ನಾನು ಅವನೊಂದಿಗೆ ಸನ್ನೆಗಳ ಮೂಲಕ ಮಾತನಾಡುತ್ತೇನೆ (ಸಿ ಪಿ ಗೈಡ್, ಪು.೮೦).

ಈ ಮಾರ್ಗದರ್ಶಿ ಮತ್ತು ಅಭ್ಯಾಸ ಪುಸ್ತಕಗಳು ವಿದ್ಯಾರ್ಥಿಗಳು ಯೋಚಿಸಿ, ಆಲೋಚಿಸಿ ಬರೆಯುವಂತಹ ಪ್ರಕ್ರಿಯೆಗೆ ಅವಕಾಶವನ್ನೇ ಉಳಿಸಿಲ್ಲ. ದುರದೃಷ್ಟಕರ ವಾಸ್ತವವೆಂದರೆ ಈ ಅಭ್ಯಾಸ ಪುಸ್ತಕಗಳ ಬಳಕೆ ಹಲವು ಶಾಲೆಗಳಲ್ಲಿ ಬಹಳ ಜನಪ್ರಿಯವಾಗಿದೆ.

## ಚರ್ಚೆ ಮತ್ತು ಪರ್ಯಾಲೋಚನೆ

'ರಿಮ್‌ಝಿಮ್' ಅಂತಹ ಪಠ್ಯಪುಸ್ತಕಗಳನ್ನು ಅನುಷ್ಠಾನಗೊಳಿಸುವಲ್ಲಿನ ಸವಾಲುಗಳ ಹಿಂದಿನ ಮೂಲಭೂತ ಕಾರಣವೆಂದರೆ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿರುವ ಸಿದ್ಧಾಂತ. ನಮ್ಮ ಶಿಕ್ಷಣ ವ್ಯವಸ್ಥೆಯು ಎರಡು 'ಬಿ'ಗಳ ಮೇಲೆ ರೂಪುಗೊಂಡಿದೆ– ಬಿಹೇವಿಯರಿಸಂ (ವರ್ತನಾವಾದ) ಮತ್ತು ಬ್ಯಾಂಕಿಂಗ್ ಕಾನ್ಸೆಪ್ಟ್ (ವ್ಯಾವಹಾರಿಕ ಪರಿಕಲ್ಪನೆ). ಅಗತ್ಯವಾದ ಮತ್ತು ಅನುಮೋದಿತವಾದ ಮಾಹಿತಿ, ರಚನೆಗಳನ್ನು ಯಾಂತ್ರಿಕವಾಗಿ ಒಪ್ಪಿಸುವಂತಹ ಅಭ್ಯಾಸವನ್ನು ವಿದ್ಯಾರ್ಥಿಗಳಿಗೆ ನಿರಂತರವಾಗಿ ನೀಡಲಾಗುತ್ತಿದೆ. ನಿಗದಿಪಡಿಸಲಾದ ಮಾನದಂಡಗಳಿಗೆ ಅನುಗುಣವಾಗಿ ಸಿದ್ಧ ಮಾದರಿಯ ಪ್ರಕಾರ ವಿದ್ಯಾರ್ಥಿಗಳನ್ನು ರೂಪಿಸಲಾಗುತ್ತಿದೆ ಮತ್ತು ಸಿದ್ಧ ಮಾದರಿಯ ಪುನರ್ಬಲನ ಬಿಟ್ಟು ಇತರ ಯಾವುದೇ ಬದಲಾವಣೆಯನ್ನು ನಿರಾಕರಿಸಲಾಗುತ್ತಿದೆ. 'ಯಥಾವತ್ತು' ನಕಲು ಮಾಡುವುದಕ್ಕೆ 'ಉತ್ತಮ' ಮತ್ತು 'ಅತ್ಯುತ್ತಮ' ಎಂಬ ಟಿಪ್ಪಣಿ ಅಥವಾ ಮೆಚ್ಚುಗೆ ನೀಡಲಾಗುತ್ತದೆ, ನೀಡಲಾದ ಉತ್ತರದಲ್ಲಿ ಬದಲಾವಣೆ ಹೊಂದಿದ ಉತ್ತರಗಳನ್ನು ಅನುಮೋದಿಸಲಾಗುವುದಿಲ್ಲ, ಜೊತೆಗೆ ಅದಕ್ಕೆ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಯಾವುದೇ ರೀತಿಯ ಚಿಂತನೆ ಅಥವಾ ಪರ್ಯಾಲೋಚನೆಗಳನ್ನು ಅವು ಪ್ರಸಕ್ತ ಶಿಕ್ಷಣ ಪದ್ಧತಿ ನಿಗದಿಪಡಿಸಿದ ಉದ್ದೇಶಗಳ ಸಾಧನೆಗೆ ಅಡ್ಡಿಯಾಗಿವೆ ಎಂಬ ಕಾರಣದಿಂದ ಅವುಗಳನ್ನು ಸ್ಪಷ್ಟವಾಗಿ ನಿರಾಕರಿಸಲಾಗುತ್ತಿದೆ. ಹೀಗಾಗಿ ತರಗತಿಗಳಲ್ಲಿ ನಿಷ್ಕ್ರಿಯ ಕಲಿಕಾರ್ಥಿಗಳನ್ನು ಸೃಷ್ಟಿಸಲಾಗುತ್ತಿದೆ.

ಫ್ರೆಯಿರೆಯ 'ವ್ಯಾವಹಾರಿಕ ಪರಿಕಲ್ಪನೆ' ನಮ್ಮ ಶಿಕ್ಷಣ ವ್ಯವಸ್ಥೆಯ ಸ್ಪಷ್ಟ ವಾಸ್ತವ ಚಿತ್ರಣವನ್ನು ಪ್ರತಿಬಿಂಬಿಸುತ್ತದೆ. ಅವನ ಪ್ರಕಾರ – 'ಶಿಕ್ಷಕರು ಹೂಡಿಕೆದಾರರಾಗಿ ಮತ್ತು ಮಕ್ಕಳು ಹೂಡಿಕೆಗೊಂಡ ಮಾಹಿತಿ ಸಂಗ್ರಹಕಾರರಾಗಿರುವ ಸ್ಥಿತಿಯಲ್ಲಿದ್ದು ಶಿಕ್ಷಣವು ಹೂಡಿಕೆಯ ಚಟುವಟಿಕೆಯಂತಾಗಿದೆ. ಸಂವಹನ ಮಾಡುವ ಬದಲು ಶಿಕ್ಷಕರು ಮಾಹಿತಿಯನ್ನು ಒದಗಿಸಿ, ಹೂಡಿಕೆ ಮಾಡುತ್ತಾರೆ ಮತ್ತು ಮಕ್ಕಳು ನಿಷ್ಕ್ರಿಯರಾಗಿ ಆ ಮಾಹಿತಿಯನ್ನು ಪಡೆದು, ಕಂಠಪಾಠ ಮಾಡಿ ಪುನರಾವರ್ತಿಸುತ್ತಾರೆ.' (ಪು.೫೩)

ಹಾಗಾಗಿ, ನಮ್ಮ ತರಗತಿಗಳ ಅಂತಿಮ ಗುರಿ 'ಆಲೋಚಿಸುವ ಮನಸ್ಸು'ಗಳನ್ನು ಸೃಷ್ಟಿಸುವುದರ ಬದಲಿಗೆ ಯಾವುದೇ ಪ್ರಶ್ನೆಗಳನ್ನು ಕೇಳದೆ ಸಂಗ್ರಹಿಸಿಕೊಳ್ಳುವ 'ಹೂಡಿಕೆ ಡಬ್ಬ'ಗಳನ್ನಾಗಿ ಮಾಡುವಂತಾಗಿದೆ. ಈ ಯಾಂತ್ರಿಕ ವಿಧಾನದಿಂದ ಭಿನ್ನವಾದ ಯಾವುದೇ ಪ್ರಯತ್ನ ಅಥವಾ ಹೊಸಕಲ್ಪನೆಗಳು ವ್ಯವಸ್ಥೆಯಲ್ಲಿ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ.

ಆದಾಗ್ಯೂ ಈ ಮೇಲಿನ ವಿವರಣೆಯ ಅರ್ಥ 'ರಿಮ್‌ಝಿಮ್' ಪಠ್ಯಪುಸ್ತಕಗಳನ್ನು ಬೋಧಿಸುವ ಶಿಕ್ಷಕರೇ ಈ ಎಲ್ಲ ಆರೋಪಗಳಿಗೆ ಹೊಣೆ ಎಂದು ಅಲ್ಲ. ಶಿಕ್ಷಕರುಗಳನ್ನು ಈ ರೀತಿಯ ಸೃಜನಾತ್ಮಕ ಪಠ್ಯಪುಸ್ತಕಗಳನ್ನು ಬೋಧಿಸುವ ಕಾರ್ಯಕ್ಕೆ ಸಶಕ್ತರನ್ನಾಗಿ ಮಾಡಲಾಗಿದೆಯೇ ಎನ್ನುವುದನ್ನೂ ಆಲೋಚಿಸಬೇಕಾಗಿದೆ. ಶಿಕ್ಷಕರು ತರಗತಿಯಲ್ಲಿ ಬೋಧಿಸುತ್ತಿರುವ ರೀತಿ ಅವರಿಗೆ ಸೇವಾಪೂರ್ವ ಮತ್ತು ಸೇವಾವಧಿ ಅಧಿವೇಶನಗಳ ಸಮಯದಲ್ಲಿ ನೀಡಲಾಗುತ್ತಿರುವ ತರಬೇತಿಯ ಗುಣಮಟ್ಟವನ್ನು ಬಿಂಬಿಸುತ್ತದೆ. ದುರದೃಷ್ಟವಶಾತ್ ಶಿಕ್ಷಕ ತರಬೇತಿಯು ಶೈಕ್ಷಣಿಕ ಪಠ್ಯಗಳ ಓದುವಿಕೆ ಮತ್ತು ಬರವಣಿಗೆಯನ್ನು ಕುರಿತ ಕೋರ್ಸ‌ಗಳನ್ನು ಅಗತ್ಯ ಪ್ರಮಾಣದಲ್ಲಿ ಹೊಂದಿಲ್ಲ. ಹಾಗಾಗಿ ಸಾಕ್ಷರತೆಯನ್ನು ಪರಿಣಾಮಕಾರಿಯಾಗಿ ಬೋಧಿಸಲು ಅಗತ್ಯವಾದ ಕಲಿಕಾ ಪ್ರಕ್ರಿಯೆಯ ಜ್ಞಾನವನ್ನು ನೀಡದಿರುವ ಕಾರಣ ಶಿಕ್ಷಕರು ಪಠ್ಯಪುಸ್ತಕದಲ್ಲಿನ ಅಭ್ಯಾಸ ಚಟುವಟಿಕೆಗಳನ್ನು ಯಾಂತ್ರಿಕ ಪುನರಾವರ್ತನೆ ಮತ್ತು ಅಭ್ಯಾಸ ಚೌಕಟ್ಟಿನ ಮೂಲಕ ಬೋಧಿಸುತ್ತಿದ್ದಾರೆ. ಇದು ಶಿಕ್ಷಕರಿಗೆ ಅವರು ಕಲಿತ ಮಾದರಿಯಂತೆಯೇ ಇರುವುದರಿಂದ ಈ ಪ್ರಕ್ರಿಯೆಯ ಬಳಕೆ ಅನುಕೂಲಕರವಾಗಿದೆ. ಆದ್ದರಿಂದಲೇ 'ರಿಮ್‌ಝಿಮ್' ಮಾರ್ಗದರ್ಶಿ ಪುಸ್ತಕಗಳಿಗೆ ಹೆಚ್ಚಿನ ಮಹತ್ತ್ವವನ್ನು ನೀಡುತ್ತಿದ್ದಾರೆ.

## ಶಿಕ್ಷಕರು ಮತ್ತು 'ರಿಮ್‌ಝಿಮ್' ಅನ್ನು ಸಶಕ್ತಗೊಳಿಸುವುದು

ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಕಾರ್ಯ ತುರ್ತಾಗಿ ಆಗಬೇಕಿದೆ. ಯುವ ಮನಸ್ಸುಗಳು ಆಲೋಚಿಸುವಂತೆ ಮತ್ತು ಪರ್ಯಾಲೋಚಿಸುವಂತೆ ಮಾಡುವ ಶಿಕ್ಷಣ ವ್ಯವಸ್ಥೆಯನ್ನು ಸೃಷ್ಟಿಸಬೇಕಿದೆ. ಈ ಗುರಿಯನ್ನು ತಲಪುವ ಮಾರ್ಗಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ ಶಿಕ್ಷಕರಿಗೆ ಅತ್ಯಗತ್ಯವಾದ ಬೋಧನಾ ಶಾಸ್ತ್ರದ ಜ್ಞಾನವನ್ನು ನೀಡಿ ಸಶಕ್ತಗೊಳಿಸುವುದು. ಶಿಕ್ಷಕರು ಪಠ್ಯಕ್ರಮವನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯ ಬಹುಮುಖ್ಯ ಭಾಗವಾಗಿರುವುದರಿಂದ ಅವರಿಗೆ ಸೂಕ್ತ ಜ್ಞಾನ ನೀಡಿ ಸಶಕ್ತಗೊಳಿಸುವುದು ಅತ್ಯಾವಶ್ಯಕವಾಗಿದೆ. ಬಾತ್ರಾ (೨೦೦೫) ಶಿಕ್ಷಕರ ಧ್ವನಿ ಮತ್ತು

ಕರ್ತೃತ್ವತೆಯ ಮಹತ್ತ್ವವನ್ನು ಎತ್ತಿ ಹಿಡಿದು ಯಾವುದೇ ಬದಲಾವಣೆ ತರುವಲ್ಲಿ 'ಇವು ಪ್ರಮುಖ ಘಟಕಗಳಾಗುತ್ತವೆ ಎಂದು ಹೇಳುತ್ತಾರೆ.

ಬಾತ್ರಾ ಅವರ ಪ್ರಕಾರ ಶಿಕ್ಷಕರನ್ನು ಸಶಕ್ತರನ್ನಾಗಿ ಮಾಡದೆ ಕೈಗೊಳ್ಳುವ ಯಾವುದೇ ಉಪಕ್ರಮ ಅಥವಾ ನೀತಿಯು ವ್ಯರ್ಥವೇ ಸರಿ.

"ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ಅರ್ಥಸೃಷ್ಟಿ ಸಾಮರ್ಥ್ಯವನ್ನು ಬೆಳೆಸುವ ಗುರಿಯನ್ನು ತಲಪುವುದು ಆ ಪ್ರಕ್ರಿಯೆಗೆ ಸ್ವಯಂ ತಾವೇ ಒಳಗಾಗಿರದ ಶಿಕ್ಷಕರಿಂದ ಹೇಗೆ ತಾನೇ ಸಾಧ್ಯ?" ಎಂದು ಬಾತ್ರಾ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು(ಎನ್‌ಸಿಎಫ್) ೨೦೦೫ ಅನ್ನು ಪ್ರಶ್ನಿಸುತ್ತಾರೆ (ಬಾತ್ರಾ, ೨೦೦೫, ಪು.೪೩-೫೦). ಈ ಹೇಳಿಕೆಯು ಶಿಕ್ಷಕರನ್ನು ತರಗತಿಯ ಕೇಂದ್ರ ಘಟಕವಾಗಿ ಪರಿಗಣಿಸುವ ಜೊತೆಗೆ ಎಲ್ಲಿಯವರೆಗೆ ಶಿಕ್ಷಕರ ಸಬಲೀಕರಣವು ನಿರ್ಲಕ್ಷಕ್ಕೆ ಒಳಗಾಗಿರುತ್ತದೋ ಅಲ್ಲಿಯವರೆಗೆ ಮಾರ್ಗದರ್ಶಿ ಪುಸ್ತಕಗಳು (ಗೈಡ್‌ಬುಕ್ಸ್) 'ಶಕ್ತಿಶಾಲಿ ಪಠ್ಯ'ಗಳಾಗಿ ಅಸ್ತಿತ್ವದಲ್ಲಿರುವುದು ಮುಂದುವರಿಯುತ್ತದೆ.

* * *

**ಪರಾಮರ್ಶನೆಗಳು:**


1. Batra, Poonam (2005, 1 October). Voice and agency of teachers: a missing link in the National Curriculum Framework. Economic and Political Weekly, 40 (36), 4347-4356. CP Guide. (n.d.). Delhi: Convent Publications.
2. Freire, Paulo (1996). Pedagogy of the oppressed. London: Penguin Books.
3. Graves, Donald H (1983). Writing: Teachers and children at work. Portsmouth, NH: Heinemann Educational Books.
4. Gupt, Sukhpal. (2007). Abhyas pustika Rimjhim-2. New Delhi: Arya Publishing Company.
5. Gupt, Sukhpal (2007). Abhyas pustika Rimjhim-4. New Delhi: Arya Publishing Company.
6. National Council of Educational Research and Training. (2005). National Curriculum Framework (2005). New Delhi: NCERT.
7. National Council of Educational Research and Training. (2007). Rimjhim-2. New Delhi: NCERT.
8. National Council of Educational Research and Training (2007). Rimjhim-4. New Delhi: NCERT.


* * *

**ಚಿಂತನಾತ್ಮಕ ಪ್ರಶ್ನೆಗಳು:**

೧. ಇಂದಿನ ತರಗತಿಗಳಲ್ಲಿನ ಬೋಧನಾ ಪ್ರಕ್ರಿಯೆಯು ಶಿಕ್ಷಣದ ಗುರಿಗಳನ್ನು ತಲಪಲು ಸಹಾಯಕವಾಗಿದೆಯೇ?

೨. ಪರಿಣಾಮಕಾರಿ ಕಲಿಕೆಗೆ ಒತ್ತು ನೀಡುವ ಉದ್ದೇಶದಿಂದ ಪಠ್ಯಪುಸ್ತಕಗಳು ರಚಿತವಾಗಿದ್ದರೂ ವಿದ್ಯಾರ್ಥಿಗಳೇಕೆ ಗೈಡ್‌ಬುಕ್‌ಗಳ ಮೊರೆಹೋಗುತ್ತಾರೆ?

೩. ಶಿಕ್ಷಣದ ಉದ್ದೇಶಗಳನ್ನು ಯಶಸ್ವಿಯಾಗಿ ಸಾಧಿಸಲು ವ್ಯವಸ್ಥೆ ಮತ್ತು ಶಿಕ್ಷಕರ ಮನೋಭಾವನೆಯಲ್ಲಿ ಆಗಬೇಕಾದ ಬದಲಾವಣೆಗಳೇನು?

೪. ಶಿಕ್ಷಕರ ವೃತ್ತಿಪರ ಅಭಿವೃದ್ಧಿಯಲ್ಲಿ ಅವರ ಕರ್ತೃತ್ವತೆಯ ಬೆಳವಣಿಗೆಗೆ ಹೆಚ್ಚಿನ ಅವಕಾಶಗಳನ್ನು ನೀಡುವ ಬಗೆ ಹೇಗೆ?

**ನಿಧಿ ಕನ್ವರ್:** ಸಹಾಯಕ ಪ್ರಾಧ್ಯಾಪಕರು, ಪ್ರಾಥಮಿಕ ಶಿಕ್ಷಣ ವಿಭಾಗ, ಮಾತಾ ಸುಂದರಿ ಕಾಲೇಜು, ದೆಹಲಿ ವಿಶ್ವವಿದ್ಯಾನಿಲಯ. ಭಾಷಾ ಶಿಕ್ಷಣ ಮತ್ತು ಬರವಣಿಗೆ ಅವರ ಪರಿಣತಿ ಕ್ಷೇತ್ರಗಳು. nidhikunwar80@gmail.com

**ಅನುವಾದ:** ಗುರುರಾಜ್ / **ಪರಿಶೀಲನೆ:** ಎಸ್ ವಿ ಮಂಜುನಾಥ್

**ಮೂಲ:** *Language and Language Teaching,* Volume 3 Number 1 Issue 5 January 2014.

❑